## ಕವಿತೆ




**ಪ್ರೊ. ಟಿ. ಯಲ್ಲಪ್ಪ**

ಕಲೆ: ರೂಪಶ್ರೀ ಕಲ್ಲಿಗನೂರು


# ಕವಿಯ ಪಾಲಿನ ಚರಮಗೀತೆ



ಕಾತರಿಸಿ ಕರೆದಾಗಲೆಲ್ಲ
ಕರೆವುದೇನು ಹಸು ಹಾಲು?
ಹಂಬಲಿಸಿ ಬರೆದಾಗಲೆಲ್ಲ
ಬರುವುದೇನು ಕವಿತೆಯ ಸಾಲು?

2
ಕಾಡು ಮೇಡಲೆದು ಹಸು
ಮೇದ ಹುಲ್ಲು ಮೆಲುಕಾಗಿ
ಕೆಚ್ಚಲಿಗಿಳಿದು ಆಗಿ ಬರಬೇಕು ಹಾಲು

3
ಜಗವೆಲ್ಲ ಅಲೆದು ಕವಿ
ಅನುಭವವನೇ ಮೆದ್ದು
ಬರೆಯಬೇಕು ನಾಕು ಸಾಲು!

4
ಲೋಕವ್ಯಾಪಾರದಲ್ಲಿ ಮಾರಾಟ ಆದೀತು
ಸಕ್ಕರೆಯ ನಡುವೆಯೇ ಕಲಬೆರಕೆ ಕಲ್ಲು
ಕಲ್ಲಾದ ಹೃದಯಗಳ ಕಲ್ಲುಸಕ್ಕರೆ ಮಾಡಿ
ಕರಗಿಸಲಾರದ ಕವಿತೆ
ಆದೀತು ಬರಿಯ ಮಾತಿನ ಸೊಲ್ಲು!

5
ಶಬ್ದ, ಅರ್ಥ, ನಾದಗಳಿವು ಮೂರು...
ಕವಿತೆಗೆ ಕಂಠ, ನಾಭಿ, ಪ್ರಾಣಗಳೇ ಇರಬಹುದು
ಕಾವ್ಯಪ್ರೇಮಿಗಳ ಹೃದಯದ ನಾಡಿಮಿಡಿತವೇ
ಆಗಿರುವ 'ಧ್ವನಿ'ಯೇ ಇರದ ಕವಿತೆ
ಕವಿಯ ಪಾಲಿಗೆ ಆದೀತು
ತನ್ನ ಸಾವನು ಕುರಿತು ತಾನೇ ಬರೆದ
ಚರಮಗೀತೆ!